**ಮುಂದುವರೆದ ಮುಖ್ಯ ವಿಚಾರಣೆಃ ಅರೋಪಿ ಪರ ಶ್ರೀಮತಿ ಜಿ ಹೆಚ್ ಯು ವಕೀಲರಿಂದಃ**

ನನಗೆ ಈ ಪ್ರಕರಣದ ಸಂಗತಿ ಸಮನ್ಸ್ ಬಂದಾಗ ತಿಳಿಯಿತು. ನಾನು ಪಿರ್ಯಾದುದಾರರಿಗೆ ಹಣವನ್ನು ಕೊಟ್ಟಿದ್ದರು ಸಹ ಸದರಿ ದುಡ್ಡನ್ನು ಕೊಟ್ಟಿಲ್ಲವೆಂದು ಪಿರ್ಯಾದುದಾರರು ಈ ಪ್ರಕರಣವನ್ನು ನನ್ನ ವಿರುದ್ದ ದಾಖಲಿಸಿರುತ್ತಾರೆ. ಸದರಿ ಪಿರ್ಯಾದುದಾರರಿಂದ ನಾನು 8 ಲಕ್ಷವನ್ನು ಪಡೆದ ಕುರಿತು ಕರಾರು ಆಗಿದ್ದು, ಸದರಿ ಮೊತ್ತವನ್ನು ನಾನು ಹಿಂದಿರುಗಿಸಿರುತ್ತೇನೆ. ತದ ನಂತರ ಸದರಿ ಕರಾರಿನಲ್ಲಿ ನಮೂದಿಸಿದ ಚೆಕ್ ನಂ ಈ ಪ್ರಕರಣದ ನಿಪಿ-1 ಆಗಿದ್ದು ಅದರಲ್ಲಿ 8 ಲಕ್ಷದ ಬದಲಿಗೆ 15 ಲಕ್ಷ ರೂಗಳೆಂದು ನಮೂದಿಸಲಾಗಿದೆ. ಸದರಿ 8 ಲಕ್ಷ ಹಣವನ್ನು ನಾನು ಪಿರ್ಯಾದುದಾರರಿಗೆ ಹಿಂದಿರುಗಿಸಿರುತ್ತೇನೆ. ತದ ನಂತರ ಪಿರ್ಯಾದುದಾರರನು ನಾನು ಕರಾರಿನಲ್ಲಿ ನಮೂದಿಸಿದ 4 ಚೆಕ್ ಗಳಾದ ಕೆನರಾ ಬ್ಯಾಂಕ್ ನ 2 ಚೆಕ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್ ನ 2 ಚೆಕ್ ಗಳನ್ನು ಹಿಂತಿರುಗಿಸುವಂತೆ ಕೇಳಿದಾಗ ಪಿರ್ಯಾದುದಾರರು ಅವುಗಳಲ್ಲಿ ನಿಪಿ-1 ನ್ನು ನಗದೀಕರಿಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ತದ ನಂತರ ಈ ಪ್ರಕರಣ ದಾಖಲಾಗಿದ್ದು ನಾನು ಅದಕ್ಕಾಗಿ ನ್ಯಾಯಾಲಯಕ್ಕೆ ಓಡಾಡುತ್ತಿದ್ದೆನೆ.

(ಅರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**